"ಪ್ಲಾಸ್ಟಿಕ್ ಬಳಸಬೇಡಿ"

# ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಲ್ಲಾಪುರ

**ಶಿರಸಿ ರಸ್ತೆ, ಮಾರ್ಕೇಟ್ ಯಾರ್ಡ್ ಯಲ್ಲಾಪುರ (ಉ.ಕ) – ೫೮೧ ೩೫೯**

ಇ–ಮೇಲ್ : apmcylpr@gmail.com ದೂರವಾಣಿ : ೦೮೪೧೯–೨೬೧೧೬೫

ಕ್ರ.ಸಂ : ಕೃಉ.ಮಾ.ಸ/ ಯ / ೨೦೮ /**2020-21** ದಿನಾಂಕ :೦೪-**12-2020**

ಗೆ,

ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
ಕೆನರಾ ವೃತ್ತ, ಶಿರಸಿ (ಉ.ಕ)

ಮಾನ್ಯರೇ,

ವಿಷಯ :- ಯಲ್ಲಾಪುರ ಮುಖ್ಯ ಮಾರುಕಟ್ಟೆ ಪ್ರಾಂಗಣ ವಿಸ್ತರಣೆಗಾಗಿ ಮಾರುಕಟ್ಟೆ ಪ್ರಾಂಗಣಕ್ಕೆ ಹೊಂದಿಕೊಂಡಿರುವ 2.00 ಹೆಕ್ಟೇರ್ ಅರಣ್ಯ ಜಮೀನು ಆನಲೈನ್ ಪ್ರಸ್ತಾವನೆ ಕುರಿತು.

ಉಲ್ಲೇಖ :- 1) ತಮ್ಮ ಪತ್ರ ಸಂಖ್ಯೆ : B2/ZFL/FCA/APMC/CR-27/2020-21
ದಿನಾಂಕ : 21-10-2020
2) ಮಾನ್ಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಯಲ್ಲಾಪುರ ಇವರ ಪತ್ರ ಸಂಖ್ಯೆ : ಎಡಿ/ ಭೂಮಿ/ಎಫ್‌ಸಿ/ಸಿಆರ್-11/2019-20/674
ದಿನಾಂಕ : 02-11-2020
3) ದಿನಾಂಕ : 24-11-2020 ರಂದು ನಡೆದ ಸಮಿತಿ ಸಭೆಯ ಠರಾವ ನಂ. 7

*-*-*-*-*-*-*-*-*-*-*

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಯಲ್ಲಾಪುರ ಎ.ಪಿ.ಎಂ.ಸಿ ಮುಖ್ಯ ಮಾರುಕಟ್ಟೆ ಪ್ರಾಂಗಣ ವಿಸ್ತರಣೆಗಾಗಿ ಅರಣ್ಯ ಜಮೀನು ಪಡೆಯುವ ಬಗ್ಗೆ ಸಲ್ಲಿಸಿರುವ ಆನಲೈನ್ ಪ್ರಸ್ತಾವನೆಗೆ ಸಂಬಂಧಿಸಿದಂತೆ ಮೇಲಿನ ಉಲ್ಲೇಖ (1) ರಲ್ಲಿ ತಾವು ಸದರ ಸ್ಥಳವನ್ನು ದಿನಾಂಕ : 19-10-2020 ರಂದು ಪರಿಶೀಲಿಸಿ, ದಟ್ಟವಾದ ಅರಣ್ಯ ಪ್ರದೇಶ ಹಾಗೂ ಬಹಳಷ್ಟು ಸ್ವಾಭಾವಿಕವಾಗಿ ಬೆಳೆದಿರುವ ಮರಗಳಿರುವುದರಿಂದ ಸದರ ಜಾಗವನ್ನು ಬಿಟ್ಟು ಕಡಿಮೆ ಮರಗಳಿರುವ ಬೇರೆ ಭೂಮಿಯನ್ನು ಅನ್ವೇಷಣೆ ಮಾಡಿ ಹೊಸದಾಗಿ ಅಂತರಜಾಲದಲ್ಲಿ ಪ್ರಸ್ತಾವನೆ ಸಲ್ಲಿಸಲು ಕ್ರಮ ಕೈಕೊಳ್ಳುವ ಬಗ್ಗೆ ಸೂಚಿಸಿರುವುದನ್ನು ಹಾಗೂ ಉಲ್ಲೇಖ (2) ರ ಉಪ ಅರಣ್ಯ ಸಂರಕ್ಷಣಾಧಿಕಾರಿ ಯಲ್ಲಾಪುರ ರವರ ಪತ್ರದನ್ವಯ ತಿಳಿಸಿರುವುದನ್ನು ಉಲ್ಲೇಖ (3) ಸಮಿತಿ ಸಭೆಯಲ್ಲಿ ಪರಿಶೀಲಿಸಿ ಚರ್ಚಿಸಲಾಗಿರುತ್ತದೆ.

ಈ ಸಮಿತಿಯಿಂದ ಈಗಾಗಲೇ ಅರಣ್ಯ ಇಲಾಖೆಯಿಂದ ಜಮೀನು ಪಡೆದು ಯಲ್ಲಾಪುರ ಮುಖ್ಯ ಮಾರುಕಟ್ಟೆ ಪ್ರಾಂಗಣ ರಚನೆ ಮಾಡಲಾಗಿದ್ದು, ಸದರಿ ಪ್ರಾಂಗಣಕ್ಕೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿ, ಉತ್ತಮವಾದ ಮಾರುಕಟ್ಟೆ ಸ್ಥಾಪಿಸಿದ್ದು, ಇದರಿಂದ ಈ ಭಾಗದ ರೈತರಿಗೆ, ಸಾರ್ವಜನಿಕರಿಗೆ, ವ್ಯಾಪಾರಸ್ಥರಿಗೆ, ಹಮಾಲರಿಗೆ, ವಾಹನದಾರರಿಗೆ ಹಾಗೂ ಇತರ ಪೇಟೆ ಕಾರ್ಯಕರ್ತರಿಗೆ ಅನುಕೂಲವಾಗಿದೆ. ಸಮಿತಿಯ ಸದರ ೮ ಎಕರೆ ಮುಖ್ಯ ಮಾರುಕಟ್ಟೆ ಪ್ರಾಂಗಣದ ಜಾಗದಲ್ಲಿ ಈಗಾಗಲೇ ಮಾರುಕಟ್ಟೆ ರಚನೆ ಮಾಡಲಾಗಿದ್ದು, ರೈತರ ಕೃಷಿ ಉತ್ಪನ್ನದ ವಹಿವಾಟು ಪ್ರಮಾಣ ಹೆಚ್ಚುತ್ತಿರುವ ಮೇರೆಗೆ ಹಾಗೂ ಲೈಸನ್ಸ್ ಹೊಂದಿ ವ್ಯವಹರಿಸುತ್ತಿರುವ ಸುಮಾರು 150 ಕ್ಕೂ ಹೆಚ್ಚಿನ ವರ್ತಕರಿಗೆ ಅಂಗಡಿ/ಗೋದಾಮು ನಿರ್ಮಿಸುವುದು ಅವಶ್ಯವಾಗಿರುತ್ತದೆ. ಇದರಿಂದ ಎಲ್ಲಾ ಕೃಷಿ ಉತ್ಪನ್ನಗಳ ವಹಿವಾಟು ಮಾರುಕಟ್ಟೆ ಪ್ರಾಂಗಣದಲ್ಲಿ ಜರುಗುವುದರಿಂದ ರೈತರಿಗೆ ಹೆಚ್ಚಿನ ಸೌಲಭ್ಯಗಳನ್ನು ನೀಡಲು ಸಾಧ್ಯವಾಗುತ್ತದೆ. ಕಾರಣ ಈಗಿರುವ ಜಾಗದ ಲಗ್ತು ಮಾರುಕಟ್ಟೆ ಪ್ರಾಂಗಣಕ್ಕೆ ಜಾಗದ ಅವಶ್ಯಕತೆ ಇರುವುದರಿಂದ 16A1A1A1A1A1 ರಲ್ಲಿಯ 2 ಎಕರೆ ಜಾಗಕ್ಕೆ ಈ ಸಮಿತಿಯಿಂದ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಪ್ರಸ್ತಾಪಿತ ಸದರಿ ಜಮೀನು ಅರಣ್ಯ ಜಾಗವಾಗಿದ್ದು ಪ್ರಾಂಗಣ ವಿಸ್ತರಣಕ್ಕೆ ಸಮಂಜಸವಾಗಿರುತ್ತದೆ ಹಾಗೂ ಈಗಿರುವ ಜಾಗಕ್ಕೆ ಹೊಂದಿ ಬೇರೆ ಖಾಲಿ ಜಮೀನು ಲಭ್ಯವಿಲ್ಲದ ಕಾರಣ ಸದರಿ ಜಾಗವನ್ನು ಕೋರಿ ಸನ್ ೧೯೯೮ ರಿಂದಲೂ ಪ್ರಸ್ತಾಪಿಸಿ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಸದರಿ ಜಾಗದಲ್ಲಿ ದಿನೇದಿನೆ ಅತಿಕ್ರಮಣವಾಗುತ್ತಿದ್ದು, ಜಾಗದ ಪ್ರಮಾಣ ಕಡಿಮೆಯಾಗುತ್ತಾ ಬಂದಿರುತ್ತದೆ. ಈ ಸಮಿತಿಗೆ ಸದರಿ ಜಾಗ ಮಂಜೂರಾದಲ್ಲಿ ಆದಷ್ಟು ಮರಗಳನ್ನು ಕಡಿತಗೊಳಿಸದೇ ಜಾಗವನ್ನು ಉಳಿಸುವ ಪ್ರಯತ್ನದೊಂದಿಗೆ ಮಾರುಕಟ್ಟೆ ಪ್ರಾಂಗಣ ರಚನೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಬಹುದಾಗಿದೆ ಹಾಗೂ ಸಮಿತಿಗೆ ಸದರಿ ಜಾಗ ಮಂಜೂರು ಮಾಡಿದಲ್ಲಿ ಮುಂದಾಗುವ ಅರಣ್ಯ ಅತಿಕ್ರಮಣವನ್ನು ತಡೆಗಟ್ಟಿ ಸದರ ಜಮೀನಿನಲ್ಲಿ ರೈತರಿಗೆ/ಸಾರ್ವಜನಿಕರಿಗೆ ಉಪಯುಕ್ತ ಮಾರುಕಟ್ಟೆ ನಿರ್ಮಾಣಕ್ಕೆ ಅನುಕೂಲವಾಗುವುದರಿಂದ ರೈತರ/ ಯಲ್ಲಾಪುರ ಪಟ್ಟಣದ ಬೆಳವಣಿಗೆ ಹಿತದೃಷ್ಟಿಯಿಂದ ಪೂರಕವಾಗಿರುವ ಮೇರೆಗೆ ಎ.ಪಿ.ಎಂ.ಸಿ ಯಲ್ಲಾಪುರ ಮುಖ್ಯ ಮಾರುಕಟ್ಟೆ ಪ್ರಾಂಗಣ ವಿಸ್ತರಣೆಗೆ ಪ್ರಸ್ತಾಪಿತ ಸದರಿ ಜಾಗವನ್ನು ಮಂಜೂರು ಮಾಡುವ

ಬಗ್ಗೆ ಪ್ರಸ್ತಾವನೆಯನ್ನು ಪರಿಗಣಿಸಿ ಮುಂದಿನ ಕ್ರಮ ಕೈಕೊಳ್ಳಬೇಕಾಗಿ ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೆನರಾ ವೃತ್ತ ಶಿರಸಿ ರವರಿಗೆ ಕೋರಬೇಕಾಗಿ ಸರ್ವಾನುಮತದಿಂದ ತೀರ್ಮಾನಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ)

ಕಾರಣ ಸದರಿ ಅಂಶಗಳನ್ನು ಪರಿಗಣಿಸಿ ಎ.ಪಿ.ಎಂ.ಸಿ ಮುಖ್ಯ ಮಾರುಕಟ್ಟೆ ಪ್ರಾಂಗಣ ವಿಸ್ತರಣಕ್ಕೆ ಅವಶ್ಯವಿರುವ ಮೇರೆಗೆ ಪ್ರಸ್ತಾಪಿತ ಅರಣ್ಯ ಜಮೀನು ಈಗಿರುವ ಜಾಗದ ಲಗ್ತ ಇರುವುದರಿಂದ ಹಾಗೂ ಸುತ್ತಮುತ್ತ ಬೇರೆ ಜಮೀನು ಲಭ್ಯವಿರದ ಪ್ರಯುಕ್ತ ಸದರಿ ಜಮೀನು ಮಂಜೂರಿ ಕೋರಿ ಈ ಸಮಿತಿಯಿಂದ ಸಲ್ಲಿಸಿರುವ ಪ್ರಸ್ತಾವನೆಯನ್ನು ತಮ್ಮ ಶಿಫಾರಸ್ಸಿನೊಂದಿಗೆ ಆನ್‌ಲೈನ್ ಮುಖಾಂತರ ಮುಂದಿನ ಕ್ರಮಕ್ಕಾಗಿ ಸಲ್ಲಿಸಬೇಕಾಗಿ ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಗೌರವಗಳೊಂದಿಗೆ,

ತಮ್ಮ ವಿಶ್ವಾಸಿ

ಕಾರ್ಯದರ್ಶಿ

ಕೃ.ಉ.ಮಾ.ಸ ಯಲ್ಲಾಪುರ (ಉ.ಕ)

# ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಲ್ಲಾಪುರ. (ಉ.ಕ.)

ದಿನಾಂಕ : 24-11-2020 ರಂದು ಸೇರಿದ ಸಮಿತಿ ಸಭೆಯ ಠರಾವು ನಂ. 7 ರ ನಕಲು.

ವಿಷಯ ನಂ. 7 : ಅರಣ್ಯ ಇಲಾಖೆ ಜಮೀನು ಕುರಿತು ಬಂದ ಪತ್ರದ ಬಗ್ಗೆ.

ಠರಾವ ನಂ. 7 (ಅ) : ಉಮ್ಮಚಗಿ ಉಪ ಮಾರುಕಟ್ಟೆಗೆ ಅರಣ್ಯ ಜಮೀನು ಕುರಿತು ಸಲ್ಲಿಸಲಾದ ಪ್ರಸ್ತಾವನೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರವರ ಕಛೇರಿಯಿಂದ ಆನ್‌ಲೈನ್ ಮೂಲಕ Additional Chief Secretary to Govt Forest Ecology & Environment Department ಬೆಂಗಳೂರು ಕಛೇರಿಗೆ ದಿನಾಂಕ : 06/12-11-2020 ರ ಪತ್ರದನ್ವಯ ಸಲ್ಲಿಸಲಾಗಿರುವುದನ್ನು ಸಭೆಯಲ್ಲಿ ಪರಿಶೀಲಿಸಲಾಯಿತು. ಸದರಿ ಪತ್ರದಲ್ಲಿ ಸದರಿ ಜಾಗವನ್ನು ಉಮ್ಮಚಗಿ ಉಪಮಾರುಕಟ್ಟೆ ಸ್ಥಾಪನೆಗೆ 20 ವರ್ಷದ ಅವಧಿಗೆ ಅಥವಾ ಪ್ರೋಜೆಕ್ಟ್ ಲೈಫ್ ರವರೆಗೆ (ಯಾವುದು ಮೊದಲೋ) ಅಲ್ಲಿವರೆಗಿನ ಅವಧಿಗೆ ಮಾತ್ರ ಎಂಬ ನಿಬಂಧನೆ ಸೇರಿರುವುದರಿಂದ ಮುಂದೆ ಪ್ರಾಂಗಣ ರಚನೆಗೆ ತೊಂದರೆ ಆಗಬಹುದಾಗಿದ್ದನ್ನು ಕಾರ್ಯದರ್ಶಿ ರವರು ಸಭೆಯ ಗಮನಕ್ಕೆ ತಂದರು. ಈ ಬಗ್ಗೆ ವಿವರವಾಗಿ ಸದರಿ ಪತ್ರದ ಅಂಶಗಳನ್ನು ಪರಿಶೀಲಿಸಿ, ಮುಂಬರುವ ದಿನಗಳಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಅವಶ್ಯಕ ಕ್ರಮ ವಹಿಸುವ ಬಗ್ಗೆ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಠರಾವ ನಂ. 7(ಬ) : ಯಲ್ಲಾಪುರ ಎ.ಪಿ.ಎಂ.ಸಿ ಮುಖ್ಯ ಮಾರುಕಟ್ಟೆ ಪ್ರಾಂಗಣ ವಿಸ್ತರಣೆಗಾಗಿ ಅರಣ್ಯ ಜಮೀನು ಪಡೆಯುವ ಬಗ್ಗೆ ಸಲ್ಲಿಸಿರುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಕೆನರಾ ವೃತ್ತ ಶಿರಸಿ ರವರು ಸದರ ಸ್ಥಳವನ್ನು ದಿನಾಂಕ : 19-10-2020 ರಂದು ಪರಿಶೀಲಿಸಿ, ದಟ್ಟವಾದ ಅರಣ್ಯ ಪ್ರದೇಶ ಹಾಗೂ ಬಹಳಷ್ಟು ಸ್ವಾಭಾವಿಕವಾಗಿ ಬೆಳೆದಿರುವ ಮರಗಳಿರುವುದರಿಂದ ಸದರ ಜಾಗವನ್ನು ಬಿಟ್ಟು ಕಡಿಮೆ ಮರಗಳಿರುವ ಬೇರೆ ಭೂಮಿಯನ್ನು ಅನ್ವೇಷಣೆ ಮಾಡಿ ಹೊಸದಾಗಿ ಅಂತರಜಾಲದಲ್ಲಿ ಪ್ರಸ್ತಾವನೆ ಸಲ್ಲಿಸಲು ಕ್ರಮ ಕೈಕೊಳ್ಳುವ ಬಗ್ಗೆ ಸೂಚಿಸಿರುವುದನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ ಯಲ್ಲಾಪುರ ರವರು ದಿನಾಂಕ : 02-11-2020 ರ ಪತ್ರದನ್ವಯ ತಿಳಿಸಿರುವುದನ್ನು ಸಭೆಯಲ್ಲಿ ಪರಿಶೀಲಿಸಲಾಯಿತು.

ಈ ಬಗ್ಗೆ ವಿವರವಾಗಿ ಚರ್ಚಿಸಲಾಗಿ, ಈಗಾಗಲೇ ಅರಣ್ಯ ಇಲಾಖೆಯಿಂದ ಜಮೀನು ಪಡೆದು ಯಲ್ಲಾಪುರ ಮುಖ್ಯ ಮಾರುಕಟ್ಟೆ ಪ್ರಾಂಗಣ ರಚನೆ ಮಾಡಲಾಗಿದ್ದು, ಸದರಿ ಪ್ರಾಂಗಣಕ್ಕೆ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿ, ಉತ್ತಮವಾದ ಮಾರುಕಟ್ಟೆ ಸ್ಥಾಪಿಸಿದ್ದು, ಇದರಿಂದ ಈ ಭಾಗದ ರೈತರಿಗೆ, ಸಾರ್ವಜನಿಕರಿಗೆ, ವ್ಯಾಪಾರಸ್ಥರಿಗೆ, ಹಮಾಲರಿಗೆ, ವಾಹನದಾರರಿಗೆ ಹಾಗೂ ಇತರ ಪೇಟೆ ಕಾರ್ಯಕರ್ತರಿಗೆ ಅನುಕೂಲವಾಗಿದೆ. ಸಮಿತಿಯ ಸದರ 15 ಎಕರೆ ಮುಖ್ಯ ಮಾರುಕಟ್ಟೆ ಪ್ರಾಂಗಣದ ಜಾಗದಲ್ಲಿ ಈಗಾಗಲೇ ಮಾರುಕಟ್ಟೆ ರಚನೆ ಮಾಡಲಾಗಿದ್ದು, ರೈತರ ಕೃಷಿ ಉತ್ಪನ್ನದ ವಹಿವಾಟು ಪ್ರಮಾಣ ಹೆಚ್ಚುತ್ತಿರುವ ಮೇರೆಗೆ ಹಾಗೂ ಲೈಸನ್ಸ್ ಹೊಂದಿ ವ್ಯವಹರಿಸುತ್ತಿರುವ ಸುಮಾರು 150 ಕ್ಕೂ ಹೆಚ್ಚಿನ ವರ್ತಕರಿಗೆ ಅಂಗಡಿ/ಗೋದಾಮು ನಿರ್ಮಿಸುವುದು ಅವಶ್ಯವಾಗಿರುತ್ತದೆ. ಇದರಿಂದ ಎಲ್ಲಾ ಕೃಷಿ ಉತ್ಪನ್ನಗಳ ವಹಿವಾಟು ಮಾರುಕಟ್ಟೆ ಪ್ರಾಂಗಣದಲ್ಲಿ ಜರುಗುವುದರಿಂದ ರೈತರಿಗೆ ಹೆಚ್ಚಿನ ಸೌಲಭ್ಯಗಳನ್ನು ನೀಡಲು ಸಾಧ್ಯವಾಗುತ್ತದೆ. ಕಾರಣ ಈಗಿರುವ ಜಾಗದ ಲಗ್ತು ಮಾರುಕಟ್ಟೆ ಪ್ರಾಂಗಣಕ್ಕೆ ಜಾಗದ ಅವಶ್ಯಕತೆ ಇರುವುದರಿಂದ 16A1A1A1A1A1 ರಲ್ಲಿಯ 2 ಎಕರೆ ಜಾಗಕ್ಕೆ ಈ ಸಮಿತಿಯಿಂದ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಪ್ರಸ್ತಾಪಿತ ಸದರಿ ಜಮೀನು ಅರಣ್ಯ ಜಾಗವಾಗಿದ್ದು ಪ್ರಾಂಗಣ ವಿಸ್ತರಣೆಕ್ಕೆ ಸಮಂಜಸವಾಗಿರುತ್ತದೆ ಹಾಗೂ ಈಗಿರುವ ಜಾಗಕ್ಕೆ ಹೊಂದಿ ಬೇರೆ ಖಾಲಿ ಜಮೀನು ಲಭ್ಯವಿಲ್ಲದ ಕಾರಣ ಸದರಿ ಜಾಗವನ್ನು ಕೋರಿ ಸನ್ ೧೯೯೮ ರಿಂದಲೂ ಪ್ರಸ್ತಾಪಿಸಿ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ. ಸದರಿ ಜಾಗದಲ್ಲಿ ದಿನೇದಿನೆ ಅತಿಕ್ರಮಣವಾಗುತ್ತಿದ್ದು, ಜಾಗದ ಪ್ರಮಾಣ ಕಡಿಮೆಯಾಗುತ್ತಾ ಬಂದಿರುತ್ತದೆ. ಈ ಸಮಿತಿಗೆ ಸದರಿ ಜಾಗ ಮಂಜೂರಾದಲ್ಲಿ ಆದಷ್ಟು ಮರಗಳನ್ನು ಕಡಿತಗೊಳಿಸದೇ ಉಳಿಸುವ ಪ್ರಯತ್ನದೊಂದಿಗೆ ಮಾರುಕಟ್ಟೆ ಪ್ರಾಂಗಣ ರಚನೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಬಹುದಾಗಿದೆ. ಮುಂದುವರೆದು, ಈ ಭಾಗದ ಅರಣ್ಯ ಜಮೀನಿನಲ್ಲಿ ಕೆಲವರು ಅತಿಕ್ರಮಣ ಮಾಡುತ್ತಿದ್ದು, ಸಮಿತಿಗೆ ಸದರಿ ಜಾಗ ಮಂಜೂರು ಮಾಡಿದಲ್ಲಿ ಮುಂದಾಗುವ ಅರಣ್ಯ ಅತಿಕ್ರಮಣವನ್ನು ತಡೆಗಟ್ಟಿ ಸದರ ಜಮೀನಿನಲ್ಲಿ ರೈತರಿಗೆ/ಸಾರ್ವಜನಿಕರಿಗೆ ಉಪಯುಕ್ತ ಮಾರುಕಟ್ಟೆ ನಿರ್ಮಾಣಕ್ಕೆ ಅನುಕೂಲವಾಗುವುದರಿಂದ ರೈತರ/ ಯಲ್ಲಾಪುರ ಪಟ್ಟಣದ ಬೆಳವಣಿಗೆ ಹಿತದೃಷ್ಟಿಯಿಂದ ಪೂರಕವಾಗಿರುವ ಮೇರೆಗೆ ಎ.ಪಿ.ಎಂ.ಸಿ ಯಲ್ಲಾಪುರ ಮುಖ್ಯ ಮಾರುಕಟ್ಟೆ ಪ್ರಾಂಗಣ ವಿಸ್ತರಣೆಗೆ ಪ್ರಸ್ತಾಪಿತ ಸದರಿ ಜಾಗವನ್ನು ಮಂಜೂರು ಮಾಡುವ ಬಗ್ಗೆ ಪ್ರಸ್ತಾವನೆಯನ್ನು ಪರಿಗಣಿಸಿ ಮುಂದಿನ ಕ್ರಮ ಕೈಕೊಳ್ಳಬೇಕಾಗಿ ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಕೆನರಾ ವೃತ್ತ ಶಿರಸಿ ರವರಿಗೆ ಕೋರಬೇಕಾಗಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಸಹಿ/-
(ಕೃಷ್ಣಕಾಂತ ಜಿ. ನಾಯ್ಕ)
ಕಾರ್ಯದರ್ಶಿ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಯಲ್ಲಾಪುರ (ಉ.ಕ.)

ಸಹಿ/-
(ಎಂ. ಜಿ. ಭಟ್ಟ, ಸಂಕದಗುಂಡಿ)
ಅಧ್ಯಕ್ಷರು
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಯಲ್ಲಾಪುರ (ಉ.ಕ)

"ನಕಲು"

ಕಾರ್ಯದರ್ಶಿ
ಕೃ.ಉ.ಮಾ.ಸ ಯಲ್ಲಾಪುರ (ಉ.ಕ)